# ಹಿರಿಯ ಸಿವಿಲ್ ನ್ಯಾಯಾಲಯ, ಚಿತ್ತಾಪೂರ

**ಅಸಲು ದಾವಾ ನಂಃ 95/2011**
**ಪಿ .ಡಬ್ಲ್ಯೂ ನಂಃ 4**

**ಸಾಕ್ಷಿಯು ಆರ್. ಎ. ಟಿ ಪರೀಕ್ಷಾ ನೆಗೆಟಿವ್ ವರದಿ ಹಾಜರು ಮಾಡಿರುತ್ತಾರೆ.**
**ದಿನಾಂಕ 04-12-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.**
**ಪಾಟಿ ಸವಾಲು : ಶ್ರೀ ಪಿ ವಿ ಡಿ ವಕೀಲರಿಂದ.**

1. ಹೀರಾಬಾಯಿ ಬರೆದ ಕೇವಲ ಒಂದೆ ದಾಖಲೆ ಅಂದರೆ ಮೃತ್ಯು ಪತ್ರಕ್ಕೆ ಸಹಿ ಮಾಡಿದ್ದೇನೆ. ನನ್ನ ಹೆಸರನ್ನು ಮಾತ್ರ ಏಕೆ ಬೆರೆದಿದ್ದಾರೆ ಗೊತ್ತಿಲ್ಲ, ಸಹಿ ಮಾಡಲು ಹೇಳಿದ್ದರಿಂದ ಮಾಡಿದ್ದೇನೆ. ನಾನು ಹೀರಾಬಾಯಿ ಶಿವಾಜಿಗೆ ಕೊಟ್ಟ ಮುಖ್ತಿಯಾರ ಪತ್ರಕ್ಕೆ ಸಹಿ ಮಾಡಿರುವುದಿಲ್ಲ. ಸಾಕ್ಷಿಗೆ ನಿಪಿ-75 ರ ಎರಡನೇ ಪುಟದಲ್ಲಿರುವ ಸಹಿ ತೋರಿಸಲಾಯಿತು ಅದರಲ್ಲಿರುವ 2 ನೇ ಸಹಿ ತನ್ನ ಸಹಿ ಎಂದು ಗುರುತಿಸಿದ್ದಾರೆ ಅದನ್ನು ನಿಪಿ-75 (ಎ) ಎಂದು ಗುರುತಿಸಲಾಯಿತು. ಮೃತ್ಯು ಪತ್ರವು ನೊಂದಣಾಧಿಕಾರಿ ಕಛೇರಿಯಲ್ಲಿ ತಯಾರಿಸಲಾಯಿತು. ಮೃತ್ಯು ಪತ್ರ ಹೀಗೆ ಬೆರಳಚ್ಚು ಮಾಡಬೇಕೆಂದು ಯಾರು ಹೇಳಿದ್ದಾರೆ ಗೊತ್ತಿಲ್ಲ.

2. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುವುದಿಲ್ಲ. ನಿಪಿ-76 ವಕೀಲರು ಮತ್ತು ನೊಂದಣಾಧಿಕಾರಿ ಇಬ್ಬರು ಓದಿ ಹೇಳಿದ್ದಾರೆ. ನೊಂದಣಾಧಿಕಾರಿ ಮುಂದೆ ಹೀರಾಬಾಯಿ ಸ್ವತಃ ತನ್ನನ್ನು ಪರಿಚಯಿಸಿಕೊಂಡಿದ್ದಾಳೆ. ಮೃತ್ಯು ಪತ್ರ ಮಾಡುವ ಒಂದು ದಿನ ಮುಂಚೆ ಹೀರಾಬಾಯಿ ತನ್ನ ತಂದೆ ಆಸ್ತಿಯನ್ನು ಮೃತ್ಯು ಪತ್ರ ಮಾಡುತ್ತೇನೆ ಸಹಿ ಮಡಲು ಬರಬೇಕೆಂದು ಹೇಳಿದ್ದಳು. ನಿಪಿ-76 ರಲ್ಲಿ ನನ್ನ ಹೆಸರು ಮತ್ತು ವಿಳಾಸ ಕೈಯಿಂದ ಬರೆದಿದ್ದಾರೆ ಅಥವಾ ಬೆರಳಚ್ಚು ಮಡಿದ್ದಾರೆ ಗೊತ್ತಿಲ್ಲ. ನಿಪಿ-76 ರಲ್ಲಿ ನನ್ನ ಸಹಿ ಹೆಸರಿನ ಮೇಲೆ ಇದೆ ಎಂದು ತೋರಿಸಿ ಕೇಳಿದಾಗ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಶಿವಾಜಿಗೆ ಮತ್ತು ನನಗೆ ಆತ್ಮೀಯತೆ ಇದೆ ಎಂದು ಆಸ್ತಿಯನ್ನು ಕಬಳಿಸಲು ದಾಖಲೆ ಸೃಷ್ಟಿ ಮಾಡಿದ್ದೇವೆ ಅನ್ನುವುದು ಸರಿಯಲ್ಲ. ನಿಪಿ-76 ಕ್ಕೆ ಹೀರಾಬಾಯಿ ಹೆಬ್ಬೆಟ್ಟು ಸಹಿ ಮಾಡಿಲ್ಲ ಆ ದಿನ ನೊಂದಣಾಧಿಕಾರಿ ಕಚೇರಿಗೆ ಹೀರಾಬಾಯಿ ಬಂದಿರಲ್ಲಿ ಅನುವುದು ಸರಿಯಲ್ಲ.

**ಉಳಿದ ಪ್ರತಿವಾದಿಯರಿಗೆ ಮತ್ತು ಅವರ ವಕೀಲರನ್ನು ಕೂಗಿಸಲಾಯಿತು ಗೈರು ಹಾಜರಿರುತ್ತಾರೆ ಯಾರು ಪ್ರತಿನಿಧಿಸಿರುವುದಿಲ್ಲ ಆದ್ದರಿಂದ ಉಳಿದ ಪ್ರತಿವಾದಿಯರ ಪರವಾಗಿ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**